# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,

# ಬೆಂಗಳೂರು ನಗರ.

## ಸಿಸಿ. 7766/2014

**ಚಾಸಾ- 5 ಪ್ರಾಸಾ- 5**

| | |
|---|---|
| **ಸಾಕ್ಷಿದಾರರ ಹೆಸರು** | ರವಿಕುಮಾರ್. ಬಿ.ಎಲ್. |
| **ತಂದೆಯ ಹೆಸರು** | ಬಿ.ಲಕ್ಷ್ಮಯ್ಯ |
| **ವಯಸ್ಸು** | 61 ವರ್ಷ |
| **ಉದ್ಯೋಗ** | ನಿವೃತ್ತ ಖಾಸಗಿ ನೌಕರ. |
| **ವಾಸ** | ನಾಗರಬಾವಿ, |
| **ಪ್ರಮಾಣೀಕರಿಸಿದ ದಿನಾಂಕ** | 02.03.2024 |

**ಮುಖ್ಯ ವಿಚಾರಣೆ : ಶ್ರೀ.ಎಂ.ಬಿ.ಆರ್. ವಿಶೇಷ ಅಭಿಯೋಜಕರವರಿಂದ :**

ನ್ಯಾಯಾಲಯದ ಮುಂದೆ ಇರುವ ಆರೋಪಿ ಪಾರ್ವತಿ ಮತ್ತು ಭಸ್ಕರ್ ಇರುತ್ತಾರೆ ಅವರ ಪರಿಚಯ ನನಗೆ ಇರುತ್ತದೆ. ನಾನು 1992 ರಿಂದ 21 ವರ್ಷ ಮ್ಯಾಕ್ಸ್ ಮೋಟಾರ್ಸ್ ನಲ್ಲಿ ಸರ್ವಿಸ್ ಇನ್ ಚಾರ್ಜರ್ ಆಗಿ ಕೆಲಸ ಮಾಡಿದ್ದೇನೆ. ನಾನು ಕೆಲಸಕ್ಕೆ ಎರಡು ವರ್ಷಗಳಾದ ನಂತರ ಒಂದನೇ ಆರೋಪಿ ಕ್ಯಾಶಿಯರ್ ಅಂತ ಮ್ಯಾಕ್ಸ್ ಮೋಟಾರ್ಸ್ ಗೆ ಸೇರಿರುತ್ತಾರೆ. ಎರಡನೇ ಆರೋಪಿ ಭಸ್ಕರ್ ನನ್ನ ಜೊತೆಗೆ ಜನರಲ್ ಮ್ಯಾನೇಜರ್ ಆಗಿ ಸೇರಿರುತ್ತಾರೆ.

2. ಸೆಪ್ಟೆಂಬರ್ 2011 ರಲ್ಲಿ ನಗದು ದುರುಪಯೋಗ ಆಗಿರುತ್ತದೆ ಎಂದು ತಿಳಿಯಿತು. ಆಗ ಅದರ ಮಾಲೀಕರಾದ ಚಾಸಾ-1 ರವರು ಒಂದನೇ ಆರೋಪಿಗೆ ಹಣ ಕುರಿತು ಕೇಳಿದಾಗ ಅವರು ಯಾವುದೇ ಉತ್ತರ ಕೊಡದೇ ಕೀ ಇಟ್ಟು ಹೋಗಿರುತ್ತಾರೆ. ಅದೇ ದಿನದಿಂದ ಒಂದನೇ ಆರೋಪಿ ಕೆಲಸಕ್ಕೆ ಬಂದಿರುವುದಿಲ್ಲ. ದಿ.14.09.2011 ರಂದು ಚಾಸಾ-1 ರವರು ನಮಗೆ ರೂ.1,31,00,000/- ಹಣ ದುರುಪಯೋಗ ಆಗಿದೆ ಎಂದು ತಿಳಿಸಿದರು. ಲೆಕ್ಕ ಎಲ್ಲಾ ಮಾಡಿದ ನಂತರ ಒಟ್ಟು ರೂ.1,61,00,000/- ದುರುಪಯೋಗ ಆಗಿರುತ್ತದೆ ಎಂದು ತಿಳಿಸಿದರು.

3. ಅಕ್ಟೋಬರ್ 18 ರಂದು ಪೊಲೀಸರು ಈ ಕುರಿತು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಮತ್ತು ನಾನು ಅವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : ಶ್ರೀ. ಎಸ್ ಆರ್ ಎನ್ ವಕೀಲರಿಂದ ಒಂದನೇ ಆರೋಪಿ ಪರ**

ವಾಹನಗಳ ಸರ್ವೀಸ್ ಇನ್ ಚಾರ್ಜ್ ಆಗಿ ಕೆಲಸ ಮಾಡಿದ್ದೇನೆ. ನಾನು ಕೆಲಸ ಮಾಡುವ ಸ್ಥಳ ಒಟ್ಟು ಸೆಲ್ಲರ್, ಗ್ರೌಂಡ್ ಫ್ಲೋರ್, ಫಸ್ಟ್ ಫ್ಲೋರ್ ಮತ್ತು ಸೆಕೆಂಡ್ ಫ್ಲೋರ್ ಇರುತ್ತದೆ. ನಾನು ಕೆಲಸ ಮಾಡುವ ಸ್ಥಳ ಗ್ರೌಂಡ್ ಫ್ಲೋರ್ ನಲ್ಲಿತ್ತು. ಕ್ಯಾಶ್ ಕೌಂಟರ್ ಒಂದನೇ ಮಹಡಿಯಲ್ಲಿತ್ತು. ನಾನು ಕೆಲಸ ಮಾಡುವ ಸ್ಥಳಕ್ಕೂ ಮತ್ತು ಕ್ಯಾಶ್ ಕೌಂಟರ್ ಗೂ ಸಂಬಂಧ ಇರಲಿಲ್ಲ, ಎರಡು ಬೇರೆ ಬೇರೆ ಸ್ಥಳಗಳು. ನಮ್ಮ ಮುಂದೆ ಕ್ಯಾಶಿಯರ್ ಅಥವಾ ಇತರೆ ವಿಭಾಗದವರನ್ನು ವಿಚಾರಣೆ ಮಾಡುವ ಅಗತ್ಯ ಇಲ್ಲ ಎಂದರೆ ಸರಿ. ಸೆಪ್ಟೆಂಬರ್ 2011 ರಲ್ಲಿ ಯಾರು ಕ್ಯಾಶಿಯರ್ ಆಗಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನನ್ನು ಸರ್ವೀಸ್ ಇನ್ ಚಾರ್ಜ್ ಆಗಿ ನೇಮಕ ಮಾಡಿಕೊಂಡ ಕುರಿತು ನೇಮಕಾತಿ ಪತ್ರ ಕೊಟ್ಟಿರುವುದಿಲ್ಲ. ನಮಗೆ ಎಂಪ್ಲಾಯ್‌ಮೆಂಟ್ ಐಡಿ ಕೊಟ್ಟಿರುವುದಿಲ್ಲ. ನಾನು ಮ್ಯಾಕ್ಸ್ ಮೋಟಾರ್ಸ್ ನಲ್ಲಿ ಕೆಲಸ ಮಾಡಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರು ನನ್ನನ್ನು ಐಡಿ ಕೇಳಿಲ್ಲ ಮತ್ತು ನಾನು ಕೊಟ್ಟಿಲ್ಲ ಮತ್ತು ನಮಗೆ ಹತ್ತಿರ ಐಡಿ ಇರುವುದಿಲ್ಲ. ಚಾಸಾ-1 ರವರು ಮತ್ತು ತನಿಖಾಧಿಕಾರಿಗಳು ಹೇಳಿ ಕೊಟ್ಟಿರುವುದನ್ನು ನಾನು ಹೇಳುತ್ತಿದ್ದೇನೆ ಎಂದರೆ ಚಾಸಾ-1 ರವರು ಈ ರೀತಿ ಆಗಿರುತ್ತದೆ ಎಂದು ಹೇಳಿದ್ದರು ಅದನ್ನು ನಾನು ಹೇಳುತ್ತಿದ್ದೇನೆ.

2. ಸೆಪ್ಟೆಂಬರ್ 2011 ರಲ್ಲಿ ಹಣ ದುರುಪಯೋಗ ಆಗಿದೆ ಎಂದು ಚಾಸಾ-1 ರವರು ಮೊದಲಾ ಬಾರಿಗೆ ಹೇಳಿರುತ್ತಾರೆ ಎಂದರೆ ಸರಿ. ಅದನ್ನು ಹೊರತುಪಡಿಸಿ ಯಾರು ಎಷ್ಟು ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ಹೇಳಿಲ್ಲ ಎನ್ನುವುದು ಸರಿ. ಚಾಸಾ-1 ರವರ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ದುರುಪಯೋಗ ಆಗಿದೆ ಅಂತ ಗೊತ್ತು ಆದರೆ ಎಷ್ಟು ಅಂತ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಆರೋಪಿತರನ್ನು ಯಾರು ಹುದ್ದೆಗೆ ನೇಮಕ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿತರನ್ನು ನಾನು ಯಾವಾತ್ತು ನೋಡಿಲ್ಲ ಎಂದರೆ ಸರಿಯಲ್ಲ. ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲು . ಶ್ರೀಮತಿ. ಎಲ್ ಕೆ, ಎರಡನೇ ಆರೋಪಿ ಪರ**

ಒಂದನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**